# ಗುಲಬರ್ಗಾ ವಿಶ್ವವಿದ್ಯಾಲಯ

ಜ್ಞಾನ ಗಂಗಾ, ಕಲಬುರಗಿ-585 106, ಕರ್ನಾಟಕ

ದೂರವಾಣಿ ಸಂ.: 08472-263202 ಫ್ಯಾಕ್ಸ್: 08472-263206, ಇ-ಮೇಲ್: registrargug@rediffmail.com


ಕ್ರ. ಸಂಖ್ಯೆ:ಗುವಿಕ/ವಿಮವಿ/ಸಂಲಗ್ನತ/ಬಿ/2022-23/752 ದಿನಾಂಕ: 02.11.2022

## ಅಧಿಸೂಚನೆ

ವಿಷಯ: 2022-23ನೇ ಶೈಕ್ಷಣಿಕ ಸಾಲಿಗೆ ಬಿ.ಸಿ.ಎ ಮತ್ತು ಬಿ.ಕಾಂ ಹೊಸ ಕೋರ್ಸಿಗೆ ಸಂಲಗ್ನತೆ ನೀಡುವ ಕುರಿತು.

ಉಲ್ಲೇಖ: 1. ಸ್ಥಾನಿಕ ವಿಚಾರಣಾ ಸಮಿತಿ ವರದಿ ದಿನಾಂಕ: 26.06.2022.
2. ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ 01 ದಿನಾಂಕ: 24.06.2022.
3. ಸಿಂಡಿಕೇಟ ಸಭೆಯ ನಿರ್ಣಯ 01 ದಿನಾಂಕ: 24.06.2022.
4. ಸರಕಾರದ ಪತ್ರ ಕ್ರಮಸಂಖ್ಯೆ ಇಡಿ 72 ಯುಜಿವಿ 2022, ಬೆಂಗಳೂರು. ದಿನಾಂಕ: 27.10.2022.
6. ಕುಲಪತಿಗಳ ಅನುಮೋದನೆ ದಿನಾಂಕ: 29.10.2022.

****

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ದ, 59ನೇ ಪ್ರಕರಣದ (11)ನೇ ಉಪಪ್ರಕರಣದಡಿ ಪ್ರದತ್ತವಾದ ಅಧಿಕಾರದಂತೆ, 2022-23ನೇ ಶೈಕ್ಷಣಿಕ ಸಾಲಿಗೆ ಗುಲಬರ್ಗಾ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಚನ್ನಬಸಮ್ಮ ಬಿ.ಸಿ.ಎ ಮತ್ತು ಬಿ.ಕಾಂ ಕಾಲೇಜು, ಗೊರನಳ್ಳಿ ಬೀದರ. ಬಿ.ಸಿ.ಎ ಮತ್ತು ಬಿ.ಕಾಂ ಹೊಸ ಕೋರ್ಸಗೆ ಸರಕಾರ ಈ ಕೆಳಕಂಡ ಷರತ್ತುಗಳನ್ನು ಅಳವಡಿಸಿ ಅನುಮೋದನೆ ನೀಡಲಾಗಿದೆ.

| ಕಾಲೇಜು ಕೋಡ್ | ಪ್ರೋಗ್ರಾಮಗಳು | ಕೋರ್ಸಗಳು | | | ವಿದ್ಯಾರ್ಥಿಗಳ ನಿಗದಿತ ಪ್ರವೇಶ ಸಂಖ್ಯೆ |
|---|---|---|---|---|---|
| ಚನ್ನಬಸಮ್ಮ ಬಿ.ಸಿ.ಎ ಮತ್ತು ಬಿ.ಕಾಂ ಕಾಲೇಜು, ಗೊರನಳ್ಳಿ ಬೀದರ. | ಬಿ.ಸಿ.ಎ NEP-20 (I & II Sem) | Ability Enhancement Compulsory Courses (AECC) | 1 | ಕನ್ನಡ | 30 (ಮೂವತ್ತು ಮಾತ್ರ) |
| | | | 2 | ಇಂಗ್ಲೀಷ | |
| | | | 3 | ಹಿಂದಿ | |
| | | Discipline Core Courses (DSC) | ವಿಶ್ವವಿದ್ಯಾಲಯದ ವಿನಿಯಮಾವಳಿಯಂತೆ | | |
| | ಬಿ.ಕಾಂ NEP-20 (I & II Sem) | Ability Enhancement Compulsory Courses (AECC) | 1 | ಕನ್ನಡ | 30 (ಮೂವತ್ತು ಮಾತ್ರ) |
| | | | 2 | ಇಂಗ್ಲೀಷ | |
| | | | 3 | ಹಿಂದಿ | |
| | | Discipline Core Courses (DSC) | ವಿಶ್ವವಿದ್ಯಾಲಯದ ವಿನಿಯಮಾವಳಿಯಂತೆ | | |
| | Affiliation Score: 57.62+ | | | | |

**ಸ್ಥಾನಿಕ ವಿಚಾರಣಾ ಸಮಿತಿಯ ವಿಧಿಸಿದ ಷರತ್ತುಗಳು:**

**B.C.A & B.Com., Programmes:**

1. Books worth Rs. 1 Lakh to be purchased.
2. Ramps should be arranged to the disables.
3. Lab should be upgraded.
4. Qualified and experience staff should be appointed.

**ಗು.ವಿ.ಕ. ಷರತ್ತುಗಳು:**

1. ಸರಕಾರದ ಪತ್ರ ಸಂಖ್ಯೆ: ಇಡಿ/72/ಯುಜಿವಿ/2022 ದಿನಾಂಕ: 27.10.2022. ಗುಲಬರ್ಗಾ ವಿಶ್ವವಿದ್ಯಾಲಯ ವ್ಯಾಪ್ತಿಯ ಚನ್ನಬಸಮ್ಮ ಬಿ.ಸಿ.ಎ ಮತ್ತು ಬಿ.ಕಾಂ ಕಾಲೇಜು ಗೊರನಳ್ಳಿ ಬೀದರ ಈ ಹೊಸ ಕಾಲೇಜನ್ನು ಬಿ.ಸಿ.ಎ & ಬಿ.ಕಾಂ ಕೋರ್ಸುಗಳೊಂದಿಗೆ 2022-23ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಆರಂಭಿಸಲು ನೀಡಿರುವ ಸಂಯೋಜನೆಯು The Karnataka State University ACT 2000 ಕಲಂ 59 (13)'' ಆದಾಗ್ಯೂ ಸಂಯೋಜನೆ ಮಂಜೂರಾತಿಯು, ಅಖಿಲಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ, ಭಾರತದ ಬಾರ್ ಕೌನ್ಸಿಲಿನ, ಅಧ್ಯಾಪಕರ ಶಿಕ್ಷಣದ

ರಾಷ್ಟ್ರೀಯ ಪರಿಷತ್ತು ಅಥವಾ ಅಂಥ ಇತರ ಪ್ರಾಧಿಕಾರಗಳು ಅಥವಾ ಸಂಬಂಧಪಟ್ಟ ನಿಕಾಯಗಳ ಪೂರ್ವಾನುಮೋದನೆಗೆ ಒಳಪಟ್ಟಿರತಕ್ಕದ್ದು ಮತ್ತು ನಿರ್ಧರಿಸಲಾದ ಪ್ರವೇಶಾವಕಾಶ ಸಂಖ್ಯೆಯು ಅಂಥ ಪ್ರಾಧಿಕಾರಗಳು ಅಥವಾ ನಿಕಾಯಗಳು ಆ ಸಂಖ್ಯೆಯನ್ನು ನಿರ್ದಿಷ್ಟಪಡಿಸಿದ್ದರೆ ಅದನ್ನು ಮೀರತಕ್ಕದ್ದಲ್ಲ."ಈ ಷರತ್ತಿಗೆ ಒಳಪಟ್ಟಿರುತ್ತದೆ.

**ಸರಕಾರದವರು ವಿಧಿಸಿದ ಪೂರ್ವೋಕ್ತ ಷರತ್ತುಗಳು:**

1. 06 ತಿಂಗಳುಗಳ ಒಳಗಾಗಿ ಅಗ್ನಿ ಸುರಕ್ಷತೆ ಪ್ರಮಾಣಪತ್ರವನ್ನು ಕರ್ನಾಟಕ ಅಗ್ನಿ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ಹಾಗೂ ಕಟ್ಟಡ ಸುರಕ್ಷತೆ/ಸಂರಚನೆ ಸ್ಥಿರತೆ ಪ್ರಮಾಣಪತ್ರವನ್ನು ಲೋಕೋಪಯೋಗಿ ಇಲಾಖೆಯಿಂದ ಪಡೆದು ವಿಶ್ವವಿದ್ಯಾಲಯದಲ್ಲಿ ಸಲ್ಲಿಸತಕ್ಕದ್ದು.
2. 03 ತಿಂಗಳುಗಳ ಒಳಗಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಪುಸ್ತಕ ಭಂಡಾರವನ್ನು ಸ್ಥಾಪಿಸತಕ್ಕದ್ದು.
3. ಪರಿಶಿಷ್ಟ ಜಾತಿ/ ಪಂಗಡಗಳಿಗೆ ಪುಸ್ತಕ ಭಂಡಾರ ಸ್ಥಾಪಿಸತಕ್ಕದ್ದು ಮತ್ತು ಕನಿಷ್ಠ 1000 ಪುಸ್ತಕಗಳು ಅಥವಾ ಒಂದೇ ವಿಷಯದಲ್ಲಿ ವಿವಿಧ/ಭಿನ್ ಶೀರ್ಷಿಕೆಗಳಡಿ 100 ಪುಸ್ತಕಗಳು ಇವುಗಳಲ್ಲಿ ಯಾವುದು ಹೆಚ್ಚೋ ಅಷ್ಟು ಸಂಖ್ಯೆಯ ಪುಸ್ತಕಗಳನ್ನು ಗ್ರಂಥಾಲಯದಲ್ಲಿ ಸಂಗ್ರಹಿಸತಕ್ಕದ್ದು ಹಾಗೂ ಯುಜಿಸಿ ವಿನಿಯಮಗಳನ್ವಯ ಅಗತ್ಯವಾಗುವ ಮೂಲಧನ ನಿರ್ವಹಣೆ ಮಾಡತಕ್ಕದ್ದು ಹಾಗೂ ಯುಜಿಸಿ ವಿನಿಯಮಗಳನ್ವಯ ಮುಚ್ಚಳಿಕೆಯ ಕಾರ್ಯಗತಗೊಳಿಸತಕ್ಕದ್ದು. ತಪ್ಪಿದಲ್ಲಿ ಹೊಸ ಸಂಯೋಜನೆಗೆ ಈ ಪತ್ರದನ್ವಯ ಮಾಡಲಾದ ಶಿಫಾರಸ್ಸು ಸ್ವಯಂಚಾಲಿತವಾಗಿ ರದ್ದಾಗುತ್ತದೆ.
4. Anti-Ranging ಮತ್ತು Anti-Sexual harassment ಕೋಶಗಳನ್ನು ಸ್ಥಾಪಿಸತಕ್ಕದ್ದು.
5. ಆಟದ ಮೈದಾನಕ್ಕೆ ಅವಕಾಶ ಕಲ್ಪಿಸಿಕೊಳ್ಳತಕ್ಕದ್ದು.
6. ಎರಡು ತಿಂಗಳೊಳಗಾಗಿ NET /SLET, Phd ಅರ್ಹತೆ ಹೊಂದಿದ ಬೋಧಕರನ್ನು ನೇಮಿಸಿಕೊಂಡು, ಯುಜಿಸಿ/ರಾಜ್ಯ ವೇತನ ಶ್ರೇಣಿಯಲ್ಲಿ ವೇತನ ಪಾವತಿಸತಕ್ಕದ್ದು.
7. ಕಾಲೇಜು ಕೌನ್ಸಿಲ್ IQA ಕೋಶವನ್ನು ಸ್ಥಾಪಿಸತಕ್ಕದ್ದು.
8. ವಿದ್ಯಾರ್ಥಿ ಹಾಜರಾತಿ ದಾಖಲಾತಿ ರೋಸ್ಟರ್ ಮತ್ತು ವೇತನ ಪಾವತಿ ವಹಿಗಳನ್ನು ನಿರ್ವಹಿಸತಕ್ಕದ್ದು.
9. ವಿಕಲಚೇತನರಿಗೆ ಅಗತ್ಯವಾಗುವ ಸೌಲಭ್ಯಗಳನ್ನು ಕಲ್ಪಿಸತಕ್ಕದ್ದು ಹಾಗೂ ಸಿಸಿಟಿವಿ ವ್ಯವಸ್ಥೆಯನ್ನು ಅಳವಡಿಸಕೊಳ್ಳತಕ್ಕದ್ದು.
10. ಶುದ್ಧ ಕುಡಿಯುವ ನೀರಿನ ಲಭ್ಯತೆಗೆ ವ್ಯವಸ್ಥೆ ಮಾಡತಕ್ಕದ್ದು.
11. ಸ್ಥಳೀಯ ವಿಚಾರಣೆ ಸಮಿತಿಯ ಹಾಗೂ ಈ ಪತ್ರದಲ್ಲಿನ ಇತರೆ ಷರತ್ತುಗಳನ್ನು ಕಾಲೇಜು ಪರಿಪಾಲಿಸುವುದನ್ನು ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು.

**ಸರಕಾರದವರು ವಿಧಿಸಿದ ಷರತ್ತುಗಳು:**

1. ಸರ್ಕಾರದ ಆದೇಶ ಸಂ. ಇಡಿ 29 ಯುಎನ್ಇ 2021, ದಿನಾಂಕ: 12.02.2021ರಲ್ಲಿ ನಿಗಧಿಪಡಿಸಿರುವ ಎಲ್ಲಾ ನಿಯತಾಂಕಗಳನ್ನು ಪೂರ್ಣಗೊಳಿಸಿತಕ್ಕದ್ದು.
2. ಅಗ್ನಿ ಸುರಕ್ಷತೆ ಪ್ರಮಾಣ ಪತ್ರವನ್ನು ಹಾಜರು ಪಡಿಸಲು 6 ತಿಂಗಳ ಕಾಲಾವಕಾಶ ನೀಡಿ ವಿಶ್ವವಿದ್ಯಾಲಯವು ಅನುಮೋದನೆ ನೀಡತಕ್ಕದ್ದು.
3. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 218 ಯುಎನ್ಇ 2020, ದಿನಾಂಕ: 24.08.2020ರಲ್ಲಿ ತಿಳಿಸಿರುವಂತೆ NCB ಸುರಕ್ಷಾ ಹಾಗೂ Fire Safety ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಿರುವುದನ್ನು ಖಚಿತಪಡೆಇಸಿಕೊಳ್ಳತಕ್ಕದ್ದು, ಪಾಲಿಸದಿರುವುದು ಕಂಡುಬಂದಲ್ಲಿ, ಸಂಬಂಧಿಸಿದವರ ವಿರುದ್ಧ ನಿಯಮಾನುಸಾರ ಕ್ರಮಕೈಗೊಳ್ಳತಕ್ಕದ್ದು.
4. ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಮೇಲ್ಕಂಡ ಕಾಲೇಜಿನ ಪದವಿ ಕೋರ್ಸ್‌ಗಳಿಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅದನ್ನು ಶಾಶ್ವತ ಅನುದಾನರಹಿತ ಕೋರ್ಸು ಎಂದು ಪರಿಗಣಿಸತಕ್ಕದ್ದು.
5. ಮೇಲ್ಕಂಡ ಕಾಲೇಜು ವಿಶ್ವವಿದ್ಯಾಲಯದ ನಿಯಮಗಳ ಉಪಬಂಧಗಳನ್ನು ತಪ್ಪದೇ ಪಾಲಿಸತಕ್ಕದ್ದು.
6. ನಿಗಧಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಮಾಡತಕ್ಕದ್ದಲ್ಲ.
7. ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ, ಆದೇಶಗಳು ಹಾಗೂ ವಿಶ್ವವಿದ್ಯಾಲಯದ ಅನುಶಾಸನ, ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
8. ಸ್ಥಳಿಯ ವಿಚಾರಣಾ ಸಮಿತಿಯ ವಿಧಿಸಿರುವ ಪ್ರತಿಯೊಂದು ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
9. ಕಾಲೇಜು/ಆಡಳಿತ ಮಂಡಲೀಯು ಶೇ. 50ರಷ್ಟು ವಿಶ್ವವಿದ್ಯಾಲಯ ಕೋಟಾವನ್ನು (ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ) ವಿಶ್ವವಿದ್ಯಾಲಯವು ನಿಗಧಿಪಡಿಸುವ ಶುಲ್ಕವನ್ನು ಮಾತ್ರ ವಸೂಲಿ ಮಾಡತಕ್ಕದ್ದು. ವಿಶ್ವವಿದ್ಯಾಲಯವು ನಿಗದಿಪಡಿಸಿದ ಶುಲ್ಕ/ಮೊತ್ತಕ್ಕಿಂತ ಬೇರೆ ಹೆಚ್ಚಿನ ಮೊತ್ತವನ್ನು ವಸೂಲಿ ಮಾಡತಕ್ಕದ್ದಲ್ಲ.
10. ದಿನಾಂಕ: 13.08.1997ರಂದು ವಿಶಾಖ ವಿರುದ್ಧ ರಾಜಸ್ಥಾನ ಸರ್ಕಾರ ಮೊಕದ್ದಮೆಯಲ್ಲಿ ಸುಪ್ರಿಂ ಕೋರ್ಟು ನೀಡಿರುವ ತೀರ್ಪಿನನುಸಾರ ಯಾವುದೇ ವ್ಯಕ್ತಿ/ವಿದ್ಯಾರ್ಥಿಯು ಗಲಬೇಯನ್ನು ಉಂಟು ಮಾಡುವುದಾಗಲೀ ಅಥವಾ ಕಾಲೇಜಿನಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನೀಡಿದ್ದಲ್ಲಿ ಅದು ಸಂಜ್ಞೇಯ ಅಪರಾಧ (Cognizable offence) ಎಂದು ಪರಿಗಣಿಸಿ, ಈ ತರಹದ ಚಟುವಟಿಕೆಗಳಲ್ಲಿ ತೊಡಗಿದ ವಿದ್ಯಾರ್ಥಿ/ವ್ಯಕ್ತಿಯ ಪ್ರವೇಶವನ್ನು ರದ್ದುಪಡಿಸುವುದು, ಮತ್ತು ಈ

ವ್ಯಕ್ತಿ/ವಿದ್ಯಾರ್ಥಿಯ ಮೇಲೆ ಕಾನೂನು ರೀತ್ಯ ಕ್ರಮ ಜರುಗಿಸತಕ್ಕದ್ದು, ಮುಂದುವರೆದು ಕಾಲೇಜು/ಆಡಳಿತ ಮಂಡಳಿಯು ಸುಪ್ರಿಂ ಕೋರ್ಟ್‌ನ ಆದೇಶದನ್ವಯ ಒಂದು ದೂರು ಸಮಿತಿಯನ್ನು ರಚಿಸಿ, ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಜರುಗಿಸತಕ್ಕದ್ದು.

11. ಕಾಲೇಜು ವಿದ್ಯಾರ್ಥಿಗಳ ಬೆಳವಣಿಗೆಗಾಗಿ ಉತ್ತಮ ಕೋರ್ಸುಗಳನ್ನು ನಡೆಸತಕ್ಕದ್ದು, ಕಾಲೇಜಿನ ಪ್ರಾಂಶುಪಾಲರು/ಆಡಳಿತ ಮಂಡಳಿಯು ವಿದ್ಯಾರ್ಥಿ/ಬೋಧಕ ವೃಂದವನ್ನು ಸೌಹಾರ್ಧಯುತವಾಗಿ ಕಾಣತಕ್ಕದ್ದು.
12. ಕಾಲೇಜಿನ ಆಡಳಿತ ಮಂಡಳಿಯಯು ಯಾವುದೇ ವಿದ್ಯಾರ್ಥಿಯ ಅಂಕಪಟ್ಟಿ ಅಥವಾ ಇತರೆ ದಾಖಲೆಗಳನ್ನು ಸದರಿ ವಿದ್ಯಾರ್ಥಿಯ ಪ್ರವೇಶವನ್ನು ವಿಶ್ವವಿದ್ಯಾಲಯವು ಅನುಮೋದಿಸುವವರೆಗೆ ಅಥವಾ ಆರು ತಿಂಗಳ ಅವಧಿಗೆ ಮೀರಿ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅನಗತ್ಯವಾಗಿ ತಡೆಹಿಡಿಯತಕ್ಕದ್ದಲ್ಲ.
13. ಕಾಲೇಜಿನ ಆಡಳಿತ ಮಂಡಳಿಯು ಯಾವುದೇ ವಿದ್ಯಾರ್ಥಿಯು ವರ್ಗಾವಣೆ ಪ್ರಮಾಣಪತ್ರ ನೀಡತಕ್ಕದ್ದಲ್ಲ, ಹಾಗೂ ಅವರಿಂದ ಬಾಕಿ ಉಳಿದಿರುವ ಶೈಕ್ಷಣಿಕ ವರ್ಷ/ಸೆಮಿಸ್ಟರ್ ಅವಧಿಗೆ ಮಾತ್ರ ಬೋಧನಾ ಶುಲ್ಕವನ್ನು ಪಡೆಯತಕ್ಕದ್ದು ಹಾಗೂ ಬೇರೆ ಯಾವುದೇ ಮೊತ್ತವನ್ನು ಪಡೆಯತಕ್ಕದ್ದಲ್ಲ.
14. ಕ್ಯಾಪಿಟೇಷನ್ ಶುಲ್ಕವನ್ನು ಯಾವುದೇ ರೂಪದಲ್ಲೂ ಪಡೆಯತಕ್ಕದ್ದಲ್ಲ.
15. ಪ್ರವೇಶಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
16. ಆಡಳಿತ ವ್ಯವಹಾರದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸತಕ್ಕದ್ದು.
17. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 59(3)ರಲ್ಲಿನ ನಿಬಂಧನೆಗೊಳಪಟ್ಟಂತೆ ಹಾಗೂ ಸ್ಥಳೀಯ ವಿಚಾರಣಾ ಸಮಿತಿ ವರದಿಯ ಶಿಫಾರಸ್ಸಿನಲ್ಲಿ ಒಳಗೊಂಡಿರುವ ಷರತ್ತುಗಳನ್ನು ಕಡ್ಡಾಯವಾಗಿ ಈ ಶೈಕ್ಷಣಿಕ ಸಾಲಿನಲ್ಲಿಯೇ ಅನುಸರಿಸತಕ್ಕದ್ದು.

02.11-22

ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

**ಗೆ,**
**ಪ್ರಾಂಶುಪಾಲರು,**
ಚನ್ನಬಸಮ್ಮ ಬಿ.ಸಿ.ಎ ಮತ್ತು ಬಿ.ಕಾಂ ಕಾಲೇಜು,
ಗೊರನಳ್ಳಿ ಬೀದರ.

**ಪ್ರತಿಗಳು:**
1. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರದ ಸಚಿವಾಲಯ, ಬೆಂಗಳೂರು.
2. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
3. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಚೇರಿ ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ.
4. ಕುಲಸಚಿವರು (ಮೌಲ್ಯಮಾಪನ), ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ
6. ವಿಷಯ ನಿರ್ವಾಹಕರು, ಅರ್ಹತಾ ಪತ್ರ ಶಾಖೆ, ವಿದ್ಯಾಮಂಡಲ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

New Affili coll&cour